# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ಶಂಕರಪುರಂ, ಬೆಂಗಳೂರು ದಕ್ಷಿಣ ವಲಯ–1

**ಮೌಲ್ಯಾಂಕನ–ಮಾರ್ಚ್2024– ಮಾದರಿಪ್ರಶ್ನೋತ್ತರಪತ್ರಿಕೆ**

೯ನೆಯ ತರಗತಿ | **ಪ್ರಥಮ ಭಾಷೆ ಕನ್ನಡ** | ಸಮಯ 3 ಗಂಟೆ 15 ನಿಮಿಷ | ಅಂಕಗಳು: 100

---

**ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.** 6*1=6

1. ನೀವೊಬ್ಬರೇ ನನ್ನನ್ನು ಒಬ್ಬ ಮನುಷ್ಯನಂತೆ ಕಂಡು ವರ್ತಿಸಿದವರು. ಸರ್ವನಾಮಕ್ಕೆ ಉದಾಹರಣೆಯಾದ ಪದ
   ಎ) ಮನುಷ್ಯ   ಬಿ) ನನ್ನನ್ನು   ಸಿ) ವರ್ತಿಸು   ಡಿ) ಕಂಡು
2. ರಾಮ ಲಕ್ಷ್ಮಣರು ಎಲ್ಲ ಸಹೋದರರಿಗೆ ಮಾದರಿಯಾಗಿದ್ದಾರೆ. ದ್ವಂದ್ವಸಮಾಸಕ್ಕೆ ಉದಾಹರಣೆ ಇದು
   ಎ) ನಡುರಾತ್ರಿ   ಬಿ) ರಾಮ ಲಕ್ಷ್ಮಣ   ಸಿ) ನೆಯ್ದು ವಸ್ತ್ರ   ಡಿ) ಮೋಸ ಮಾಡು
3. ಹಬ್ಬ ಹರಿ ದಿನಗಳಲ್ಲಿ ಡೊಳ್ಳು ಕುಣಿತವನ್ನು ಪ್ರದರ್ಶಿಸಲಾಗುತ್ತದೆ. ವಿಜಾತೀಯ ಸಂಯುಕ್ತಾಕ್ಷರ ಪದವಿದು
   ಎ) ಹಬ್ಬ   ಬಿ) ಸೊಪ್ಪು   ಸಿ) ದಟ್ಟ   ಡಿ) ಪ್ರದರ್ಶನ
4. ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ :
   ಎ)34   ಬಿ)9   ಸಿ)25   ಡಿ)13
5. ಶ್ರೀರಾಮನು ಭರತನಿಗೆ ರಾಜ್ಯವನ್ನು ಚೆನ್ನಾಗಿ ಪಾಲಿಸಲು ಸಲಹೆಯನ್ನು ನೀಡಿದನು. 'ರಾಜ್ಯವನ್ನು' ಪದವು ಈ ಸಂಧಿಗೆ ಉದಾಹರಣೆಯಾಗಿದೆ
   ಎ) ಆದೇಶ ಸಂಧಿ   ಬಿ) ಲೋಪ ಸಂಧಿ   ಸಿ) ವೃದ್ಧಿ ಸಂಧಿ   ಡಿ) ಆಗಮ ಸಂಧಿ
6. ಕೆಲವು ವರ್ಷಗಳ ಕಾಲ ಬಿ.ಜಿ. ಎಲ್. ಸ್ವಾಮಿಯವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದರು. ಅನ್ವರ್ಥನಾಮಪದಕ್ಕೆ ಉದಾಹರಣೆ ಇದು
   ಎ) ಪ್ರಾಧ್ಯಾಪಕ   ಬಿ) ಸ್ವಾಮಿ   ಸಿ) ವರ್ಷ   ಡಿ) ಮೈಸೂರು

**ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ.**

**4*1=4**

7. ಹಣತೆ : ದೀಪ:: ಬೆರಗು :____
8. ನಡು ನಡುವೆ : ದ್ವಿರುಕ್ತಿ:: ಹಾಲ್ಜೇನು :_____
9. ರಾಜ್ಯದಲ್ಲಿ :ಸಪ್ತಮೀ ವಿಭಕ್ತಿ:: ಗುರುವಿಂದ : ____
10. ರಾಯ: ರಾಜ::ಸಂಧ್ಯಾ :_____

**ಕೆಳಗಿನ ಪ್ರತಿಯೊಂದು ಪ್ರಶ್ನೆಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** 7*1=7

ರಾಧಾಕೃಷ್ಣನ್ ಅವರು ಆಂಧ್ರಪ್ರದೇಶ (ಈಗಿನ ಸೀಮಾಂಧ್ರ) ಮತ್ತು ತಮಿಳುನಾಡಿನ ಗಡಿಯಲ್ಲಿರುವ ತಿರುತ್ತಣಿ ಎಂಬ ಪುಟ್ಟ ಗ್ರಾಮದಲ್ಲಿ ಕ್ರಿಸ್ತ ಶಕ ೧೮೮೮ ಸೆಪ್ಟೆಂಬರ್ ೫ ರಂದು ಜನಿಸಿದರು. ತಂದೆ ವೀರಸ್ವಾಮಿ, ತಾಯಿ ಸೀತಮ್ಮ. ಅವರ ಮುತ್ತಜ್ಜ ವೀರಸ್ವಾಮಿ ಆಂಧ್ರದ ಸರ್ವೆಪಲ್ಲಿಯಿಂದ ತಮಿಳುನಾಡಿನ ತಿರುತ್ತಣಿಗೆ ಬಂದು ನೆಲೆಸಿದರು. ಪತ್ನಿ ಶಿವಕಾಮು(ಪದ್ಮ) ರಾಧಾಕೃಷ್ಣನ್ ಅವರ ಸಾಧನೆಯಲ್ಲಿ ವಿಶೇಷ ಸಹಕಾರ ನೀಡಿದರು. ವೀರಸ್ವಾಮಿ ಅವರಿಗೆ ತಮ್ಮ ಮಗ ಆಂಗ್ಲ ಭಾಷೆ ಕಲಿಯುವುದು ಇಷ್ಟವಿರಲಿಲ್ಲ. ದೇಶೀ ಭಾಷೆಯಾಗಿದ್ದ ಸಂಸ್ಕೃತವನ್ನು ಕಲಿಯಲಿ ಎಂಬ ಅಪೇಕ್ಷೆ. ಆದರೆ ಅದೂ ಸಾಧ್ಯವಾಗಲಿಲ್ಲ. ಅನಂತರ ತಿರುಪತಿಯ ಹರ್ಮನ್ಸ್ ಬರ್ಗ್ ಮಿಷನರಿ ಶಾಲೆಗೆ ಸೇರಿಸಿದರು. ಅಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಹೆಚ್ಚು ಮನ್ನಣೆಯಿತ್ತು.

11. ವೀರ ಸ್ವಾಮಿಯವರ ಆಸೆ ಏನಾಗಿತ್ತು?
12. ಇಂಗ್ಲೀಷ್ ವಿದ್ಯಾಭ್ಯಾಸಕ್ಕೆ ಹೆಚ್ಚು ಮನ್ನಣೆ ಇದ್ದ ಶಾಲೆ ಯಾವುದು?
13. ರಾಧಾಕೃಷ್ಣನ್ ಅವರು ಜನಿಸಿದ ಸ್ಥಳ ಯಾವುದು?
14. ರಾಧಾಕೃಷ್ಣನ್ ಅವರ ಸಾಧನೆಯಲ್ಲಿ ವಿಶೇಷ ಸಹಕಾರ ನೀಡಿದವರು ಯಾರು?

    ನವಭಾವ-ನವಜೀವ-ನವಶಕ್ತಿ ತುಂಬಿಸುವ ಹಾಡೊಮ್ಮೆ ಹಾಡಬೇಕು;
    ತೀವ್ರತರ ಗಂಭೀರ ಭಾವನೆಯ ತೆರೆ ಮಸಗಿ ವೀರಧ್ವನಿಯೇರಬೇಕು;

15. ವೀರ ಧ್ವನಿ ಹೇಗೆ ಏರಬೇಕು?
16. ಕವಿ ಎಂತಹ ಹಾಡು ಹಾಡಬೇಕೆಂದು ಬಯಸುವರು?

ಆ ನಾಟಕ ಪ್ರದರ್ಶನ ನೋಡಲು ಪಿಟೀಲು ಚೌಡಯ್ಯನವರು ಹಾಗೂ ಸಿನಿಮಾ ಪ್ರವರ್ತಕರಾಗಿದ್ದ ಕೆ.ಹಿರಣ್ಣಯ್ಯ ಅವರು ಬಂದಿದ್ದರು. ಅವರಿಬ್ಬರು ಅದೇ ಕಾಲಕ್ಕೆ 'ವಾಣಿ' ಎಂಬ ಚಲನಚಿತ್ರವನ್ನು ಸಿದ್ಧಗೊಳಿಸುತ್ತಿದ್ದರು. ಅಂದು ರಂಗದ ಮೇಲೆ ಪಂಢರಿಬಾಯಿಯವರು ಅಭಿನಯವನ್ನು ಕಂಡು ಮೆಚ್ಚಿ ತಮ್ಮ ಚಿತ್ರದಲ್ಲಿ ಸಣ್ಣ ಪಾತ್ರವೊಂದನ್ನು ನೀಡಿದರು. ಹೀಗೆ ಮಹಾನಟಿಯೊಬ್ಬಳ ಸಿನಿಮಾಯಾನ ಶುರುವಾಯಿತು. 'ವಾಣಿ' ಚಿತ್ರದಲ್ಲಿ ಪಂಢರಿಬಾಯಿ ಅವರ ನಟನಾ ಪ್ರತಿಭೆ ಲೋಕದೆದುರು ಅನಾವರಣಗೊಂಡಿತು.

17. ನಾಟಕ ನೋಡಲು ಯಾರು ಆಗಮಿಸಿದ್ದರು?

**ಕೆಳಗಿನ ಪ್ರಶ್ನೆಗಳಿಗೆ 3-4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10*2=20**

ಇತ್ತ ರಾಜಧಾನಿಯಲ್ಲಿ ಸಂರಕ್ಷಕಳಾಗಿ ನಿಂತಿದ್ದ ದೇವತೆ ಎಂದರೆ ಮಹಾರಾಣಿ ಶಾಂತಲಾದೇವಿ. ಅವಳಿಗೆ ನೆರವು ನೀಡುವುದಕ್ಕೆ ನೇಮಿತನಾಗಿದ್ದವನು ಯುವರಾಜ ಕುಮಾರ ಉದಯಾದಿತ್ಯ. ಯುದ್ಧಕ್ಕಾಗಿ ಸಮಸ್ತ ಸೇನೆಯೂ ರಾಜ್ಯದಿಂದ ದೂರ ಹೋದಾಗ ಪಕ್ಕದ ಪಾಳೇಗಾರರೂ, ದುಷ್ಟರೂ ದೊಂಬಿ ಏಳುವುದು ಸಹಜ. ಆದರೆ ಮಹಾರಾಣಿಯವರು ದಂಡವನ್ನು ಹಿಡಿದು ಕುಳಿತಿರುವುದನ್ನು ಕೇಳಿದ ಕೂಡಲೆ ಯಾವ ಗದ್ದಲವೂ ಕೇಳಿ ಬರದಾಯಿತು. ಮಹಾರಾಣಿ ಪರಿಸ್ಥಿತಿಯನ್ನು ಗೂಢಚಾರರಿಂದ ತಿಳಿಯುತ್ತಿದ್ದಳು. ಆಗಾಗ ತಾನೂ ವೇಷ ಮರೆಸಿಕೊಂಡು ದೇಶದ ಒಳಭಾಗಗಳಲ್ಲಿ ಸಂಚರಿಸಿ ಬರುತ್ತಿದ್ದಳು. ಒಮ್ಮೆ

18. ರಾಜಧಾನಿಯಲ್ಲಿ ಸಂರಕ್ಷಕರಾಗಿ ನಿಂತಿದ್ದವರು ಯಾರು? ರಾಜ್ಯದ ಪರಿಸ್ಥಿತಿಯನ್ನು ಹೇಗೆ ತಿಳಿಯುತ್ತಿದ್ದರು?
19. ಯುದ್ಧಕ್ಕಾಗಿ ಸಮಸ್ತ ಸೇನೆಯು ರಾಜ್ಯದಿಂದ ದೂರ ಹೋದಾಗ ಯಾವ ಪರಿಸ್ಥಿತಿ ಇರುತ್ತದೆ?

ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತನೇ ಲೇಸೆಂದು ತಿಳಿದು ಅವನನ್ನು ಆದರಿಸುವೆಯ ಏಕೆಂದರೆ ಕಷ್ಟಕಾಲದಲ್ಲಿ ಪಂಡಿತನೊಬ್ಬನೇ ಸರಿಯಾದ ಉಪಾಯವನ್ನು ಬೋಧಿಸಿ ಕಾರ್ಯವನ್ನು ನಿರ್ವಹಿಸಬಲ್ಲ. ಮೂರ್ಖರ ಸಂಖ್ಯೆ ಸಾವಿರವಿರಲಿ, ಹತ್ತು ಸಾವಿರವೇ ಇರಲಿ, ರಾಜನಿಗೆ ಅದರಿಂದ ಯಾವ ಸಹಾಯವೂ ಆಗುವುದಿಲ್ಲ. ಮೇಧಾವಿಯೂ ಶೂರನೂ ಕಾರ್ಯದಕ್ಷನೂ ರಾಜ್ಯಶಾಸ್ತ್ರವಿಶಾರದನೂ ಆದ ಸಚಿವನು ಒಬ್ಬನೇ ಆದರೂ ರಾಜನಿಗಾಗಲೀ ರಾಜ್ಯದ ಆಡಳಿತವನ್ನು ನಿರ್ವಹಿಸುವವನಿಗಾಗಲಿ ಮಹತ್ತರವಾದ ಶ್ರೇಯಸ್ಸನ್ನು ತಂದುಕೊಡಬಲ್ಲನು.

20. ಉತ್ತಮ ಸಚಿವನ ಲಕ್ಷಣಗಳೇನು?
21. ರಾಜ್ಯದ ಕೆಲಸ ಕಾರ್ಯಗಳಿಗೆ ಪಂಡಿತರನ್ನು ಏಕೆ ಆಯ್ಕೆ ಮಾಡಬೇಕು?



ನವರತ್ನ ಹೇಮನಿರ್ಮಿತವೆನಿಪಾಸ್ಥಾನ ಭವನದೊಳಾ ರಾಜರತ್ನ
ಛವಿವಡೆದೆಸೆದನು ರತ್ನಪುಷ್ಪಕದೊಳು ದಿವಿಜೇಂದ್ರನೊಪ್ಪವಂದದೊಳು

ತರತರವಿಡಿದು ಥಳಿಸುತಿಹ ದೀರ್ಘ ಚಾ ಮರಗಳ ಸಾಲೊಳೆಸೆದನು
ಹರಿವ ಬೆಳ್ಮುಗಿಲೊಳು ತೋರಿ ಮರಸುವ ಚಂದಿರನೊ ಭಾಸ್ಕರನೋಯೆಂಬಂತೆ

22. ಭರತ ಚಕ್ರವರ್ತಿಯು ಸಭೆಯಲ್ಲಿ ಹೇಗೆ ಕಂಗೊಳಿಸುತ್ತಿದ್ದನು?
23. ಭರತನ ಅರಮನೆಯು ಹೇಗಿತ್ತು?
24. ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು?
25. ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳಾವುವು?
26. ಪಂಡರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು?
27. ಲಾಂಚು ಬರುವವರೆಗೆ ಹೊತ್ತು ಕಳೆಯಲು ಏನೆಲ್ಲ ಚಟುವಟಿಕೆಗಳನ್ನು ಮಾಡಬಹುದು?

**ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ ಕಾಲ ಕೃತಿ ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **2*3=6**

28. ಶಿವರಾಮ ಕಾರಂತ
29. ಸು. ರಂ. ಎಕ್ಕುಂಡಿ





**ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ಗುರುವಿಂದು ಬೆಸಸೆ ಭಿಕ್ಷೆಗೆ
ಬರುತಿರೆ ಪಿಡಿತಂದರೆಮ್ಮನಾ ದೆಸೆಗೆ ಭಯಂ

**ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಲಕ್ಷಣ ಬರೆದು ಸಮನ್ವಯಗೊಳಿಸಿರಿ.** **1*3=3**

31. ಗೀಜಗನ ಗೂಡುಗಳು ತೊಟ್ಟಿಲಿನಂತೆ ತೂಗಾಡುತ್ತಿದ್ದವು

**ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

32. ಹಾಸಿಗೆ ಇದ್ದಷ್ಟು ಕಾಲು ಚಾಚು

ಅಥವಾ

ಮಾತೆ ಮುತ್ತು; ಮಾತೆ ಮೃತ್ಯು.

**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

33. " ಪ್ರಾಚೀನ ಗುಡಿ ಗೋಪುರಗಳು ಗೂಬೆಯ ಮನೆಗಳಾಗಿದ್ದವು"

34. " ಸ್ವಾಮಿ ನಮ್ಮಯ ದೇವರು ಬಂದಾನ ಬನ್ನಿರೇ"

35. "ಒಳಗೆ ಬಂದಿದ್ದರೆ ನೀವು ನುಡಿಸುತ್ತಿರಲಿಲ್ಲ"

36. " ಕಳೆದ ಸಿಗುರಿನ ಕಬ್ಬಿನಂದದಿ"

37. " ಒಳಗೆ ಬಂದಿತು ಬಳಿಗೆ ಬಿಕ್ಕಿ ಬಿಕ್ಕಿ"

38. "ಚಂದಿರನೋ ಭಾಸ್ಕರನೋ ಎಂಬಂತೆ"

**ಕೆಳಗಿನ ಪದ್ಯ ಭಾಗವನ್ನು ಪೂರ್ಣ ಮಾಡಿ ಬರೆಯಿರಿ.** **1*4=4**

39. ಅಯ್ಯಯ್ಯ________ ಅಥವಾ ಅಂಬುಜವೆಲ್ಲವು________

________________

________________

————————ಕೇಳಬೇಕಣ್ಣ

________________

________________

————————ಮರೆದುದಲ್ಲಲ್ಲಿ

**ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥ ಮಾಡಿಕೊಂಡು ಅಡಕವಾಗಿರುವ ಮೌಲ್ಯವನ್ನು ಆಧರಿಸಿ ಸಾರಾಂಶ ಬರೆಯಿರಿ.** **1*4=4**

40. ಮಾತಿನೊಳಗ ಮಾತಿಲ್ಲದವನ ಸ್ನೇಹ ಜಾತಿ ಜನ್ಮಕ ಬೇಡ

ಮೀನು ಮನುಷ್ಯನ ಸ್ನೇಹ ಮಾಡಿ

ನೀನು ಕೆಡಲಿಬೇಡ

**ಕೆಳಗಿನ ಪ್ರಶ್ನೆಗಳಿಗೆ 8 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ರಾಧಾಕೃಷ್ಣನ್ ಅವರು ಅಧ್ಯಾಪಕರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ವಿವರಿಸಿ.

ಅಥವಾ

ರಾಧಾಕೃಷ್ಣನ್ ಅವರಿಗೆ ಮೈಸೂರಿನಲ್ಲಿ ನೀಡಿದ ಬೀಳ್ಕೊಡುಗೆಯ ವಿಶೇಷತೆಯನ್ನು ಕುರಿತು ವಿವರಿಸಿ.



42. ಹರಿಶ್ಚಂದ್ರನು ನೀಡಿದ ಬಹುಮಾನವನ್ನು ತಿರಸ್ಕರಿಸಿ ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ.

ಅಥವಾ

ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.



**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. 1*4=4. (2+2=4)**

43. ಯುದ್ಧ, ಇತಿಹಾಸದುದ್ದಕ್ಕೂ ತನ್ನ ಇರುವಿಕೆಯನ್ನು ತೋರಿಸುತ್ತಾ ಬಂದಿದೆ ಯಾವುದೇ ಸಾಮ್ರಾಜ್ಯದ ಏಳುಬೀಳುಗಳ, ಅದು ಪ್ರಮುಖ ಪಾತ್ರವಹಿಸಿದೆ. ಯುದ್ಧ ನಡೆಯಲು ಕಾರಣಗಳು ಹಲವು. ಸಾಮ್ರಾಜ್ಯ ವಿಸ್ತರಣೆ, ಲೋಭ, ವೀರತ ಪ್ರದರ್ಶನ ಒಂದು ಕಡೆಯಾದರೆ, ಕುಟುಂಬ ಕಲಹಗಳೂ ಯುದ್ಧಕ್ಕೆ ನಾಂದಿ ಹಾಡಿದ ಘಟನೆಗಳು ದಾಖಲಾಗಿವೆ ಸುಮಾರು ಐದು ಸಾವಿರ ವರ್ಷಗಳ ಹಿಂದೆ ನಡೆದ ಕುರುಕ್ಷೇತ್ರ ಯುದ್ಧ ಇದಲ್ಲರ ಸ್ಪಷ್ಟ ನಿದರ್ಶನ ಕುರುವಂಶದ ರಾಜಕುಮಾರರ ಅಂತಃಕಲಹ ಐವತ್ತು ಲಕ್ಷ ಜನರ ಪ್ರಾಣಹಾನಿಯೊಂದಿಗೆ ಪರ್ಯವಸ್ತಾನವಾಯಿತು. ಐತಿಹ್ಯದಂತೆ ಕೇವಲ ಹದಿನೆಂಟು ದಿನ ನಡೆದ ಈ ಯುದ್ಧ, ಕಂಡ ಪರಿಣಾಮ ಅತ್ಯಂತ ಘೋರ.

ಭಾರತ ತನ್ನ ಇತಿಹಾಸದಲ್ಲಿ ಕಂಡ ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು. ತನ್ನ ಹಠದ ಪಟ್ಟನ್ನು ಸಡಿನರ ಮನೋನಿಶ್ಚಯದಂತೆ ಅಪೂರ್ವಕುಶಲತೆಯನ್ನು ತೋರಿದ ಪ್ರತಿಭಾವಂತನೀತ, ಸರಳ ತಂತ್ರೋಪಾಯಗಳಂಂ ಚಂದ್ರಗುಪ್ತನ ಶತ್ರುಬಲವನ್ನು ನಿರಾವಲಂಬನಗೊಳಿಸಿ ಮೌರ್ಯ ವಂಶದ ಸ್ಥಾಪನೆಗೆ ಮಾರ್ಗದರ್ಶಕನಾಗುತ್ತಾನೆ. ತನ್ನನ್ನೇ ಹಿಂಬಾಲಿಸಿ ಬಂದ ರಾಜ್ಯಲಕ್ಷ್ಮೀ, ಅಧಿಕಾರಗಳನ್ನು ದೂರೀಕರಿಸಿ ವಿರಕ್ತನಂತೆ ಆಶ್ರಮವಾಸಿಯಾಗುತ್ತಾನೆ.

ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ವಿಧಗಳು. ಮೊದಲನೆಯದು ಪ್ರಕಾಶಯುದ್ಧ - ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ. ಎರಡನೆಯದು ಕೂಟಯುದ್ಧ - ತಂತ್ರಗಳ ಮುಲಕ ಯುದ್ಧ ಮಾಡುವುದು. ಮೂರನೆಯದು ಮೌನಯುದ್ಧ - ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತ ಕಾರ್ಯಾಚರಣೆ ನಡೆಸುವುದು. ಯಾವಾಗ ರಾಜ ಶತ್ರುಗಳಗಿಂತ ಬಲಿಷ್ಠನಾಗಿದ್ದು ಪರಿಸ್ಥಿತಿ ಅನುಕೂಲಕರವಾಗಿರುತ್ತದೋ ಆಗ ಅವನು ಮುಕ್ತ ಯುದ್ಧವನ್ನೇ ಮಾಡಬೇಕು. ಸೂಚಿತ ಸ್ಥಳದಲ್ಲಿ, ನಿರ್ದಿಷ್ಟ ಸಮಯದಲ್ಲಿ ನಡೆಯುವ ಮುಕ್ತ ಯುದ್ಧವೇ ಧರ್ಮಯುದ್ಧ

ಪ್ರಶ್ನೆಗಳು :

1. ಚಾಣಕ್ಯನ ಪ್ರಕಾರ ಮೂರು ಬಗೆಯ ಯುದ್ಧಗಳಾವುವು? ವಿವರಿಸಿ.
2. ಯುದ್ಧಕ್ಕೆ ಕಾರಣವಾದ ಅಂಶಗಳನ್ನು ಒಂದು ನಿದರ್ಶನದೊಂದಿಗೆ ಬರೆಯಿರಿ.

**ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ**. 1*5=5

44. ನಿಮ್ಮನ್ನು ಗಾಂಧಿ ಬಜಾರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಕಾರ್ತಿಕ್ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದ ವರದಿಯನ್ನು ಪ್ರಕಟಿಸುವಂತೆ ಕೋರಿ ಉದಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಮಡಿವಾಳದ ನಿವಾಸಿ ಸ್ಮಿತಾ ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಹುಬ್ಬಳ್ಳಿಯಲ್ಲಿರುವ ನಿಮ್ಮ ಗೆಳತಿ ಶೋಭಾ ಎಂಬುವವರಿಗೆ ಪತ್ರ ಬರೆಯಿರಿ.

**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ 15 ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1*5=5**

45. ಕ್ರೀಡೆಗಳ ಮಹತ್ವ

ಅಥವಾ

ರಾಷ್ಟ್ರೀಯ ಭಾವೈಕ್ಯತೆ